# ನಗರಸಭಾ ಕಾರ್ಯಾಲಯ, ರಾಣೇಬೆನ್ನೂರು

ಸಂಖ್ಯೆ ನಸರಾ:ಕಾಮಗಾರಿ:12ನೇಹಯೋ:ವಹಿ: :2006–07 ದಿನಾಂಕ:05/04/2007

## –: ಟೆಂಡರ್ ಪ್ರಕಟಣೆ :–

ಕರ್ನಾಟಕ ಪುರಸಭೆ ಕಾಯಿದೆ 1964 ಹಾಗೂ ಕ.ಸಾ.ಸಂಪಾ.ಅ 1999 (ತಿದ್ದುಪಡಿ ನಿಯಮಗಳಂತೆ)ರ ಪ್ರಕಾರ ಲೋಕೋಪಯೋಗಿ ಇಲಾಖೆಯ ಸಿವಿಲ್ ಗುತ್ತಿಗೆದಾರರೆಂದು ಲೈಸೆನ್ಸ್ ಪಡೆದ ರಾಣೆಬೆನ್ನೂರ ನಗರಸಭೆಯ ಕಛೇರಿಯಲ್ಲಿಯೂ ಸಹ ಗುತಿಗೆದಾರರೆಂದು ನೊಂದಾಯಿಸಿದವರಿಗೆ ತಿಳಿಯಪಡಿಸುವುದೇನೆಂದರೆ, 12ನೇ ಹಣಕಾಸು ಯೋಜನೆಯಡಿ ಈ ಕೆಳಕಂಡ 3 ಕಾಮಗಾರಿಗಳನ್ನು ಕೈಗೊಳ್ಳಲು ನಿರ್ಣಯಿಸಲಾಗಿದ್ದು, ಸದರಿ ಕಾಮಗಾರಿಗಳಿಗೆ ದ್ವಿಪ್ರತಿಗಳಲ್ಲಿ ಐಟಂವಾರು ಟೆಂಡರನ್ನು ಕರೆಯಲಾಗಿದೆ.

| ಅ. ನಂ. | ಕಾಮಗಾರಿಗಳ ವಿವರ | ಅಂದಾಜು ರಕಂ | ಇ.ಎಂ.ಡಿ. ಹಣ |
|---|---|---|---|
| 1 | 2 | 3 | 4 |
| 1. | ವಾರ್ಡ್ ನಂ.31 ವಿದ್ಯಾ ನಗರ ಹಳೇ ಅಂತರವಳ್ಳಿ ರಸ್ತೆಯ ಶ್ರೀ.ಹುಲ್ಲತ್ತಿ ಇವರ ಮನೆಯಿಂದ 4ನೇ ಅಡ್ಡರಸ್ತೆವರೆಗಿನ ಡಾಂಬರ್ ರಸ್ತೆಗೆ ಮರು ಡಾಂಬರೀಕರಣ ಮಾಡಿ, ಮುಂದೆ ಹಿತ್ತಲಮನಿ ಇವರ ಮನೆ ಹತ್ತಿರದ ನಗರಸಭೆ ವಾಲ್ವ್‌ವರೆಗಿನ ರಸ್ತೆಗೆ ಖಡೀಕರಣ ಮಾಡಿ ಡಾಂಬರೀಕರಣ ಮಾಡುವದು. | 5,60,000/– | 11,200/– |
| 2. | ಮೇಡ್ಲೇರಿ ರಸ್ತೆಯಿಂದ ವಿಕಾಸ ನಗರ ಹಾಗೂ ಮೃತ್ಯುಂಜಯ ನಗರದ ಮುಖಾಂತರ ರಾಷ್ಟ್ರೀಯ ಹೆದ್ದಾರಿ ನಂ.4 ರವರೆಗಿನ ರಸ್ತೆಗೆ ಡಾಂಬರೀಕರಣ ಮಾಡುವುದು. | 5,30,000/– | 10,600/– |
| 3. | ವಿ.ನಂ.25ರ ಹಳೇ ಮಾಗೋಡ ರಸ್ತೆ ಶ್ರೀ.ಎಸ್.ಜೆ.ಶೇಜವಾಡಕರ ಮನೆಯಿಂದ ಉಮಾಶಂಕರ ನಗರದ ಟಿ.ಸಿ.ಪಾಟೀಲ ಇವರ ಮನೆ ಹತ್ತಿರದ ದೊಡ್ಡ ಗಟಾರದವರೆಗೂ ಹೊಸದಾಗಿ ಕಲ್ಲಿನ ಗಟಾರ ನಿರ್ಮಿಸುವುದು. | 8,50,000/– | 17,000/– |

### ಷರತ್ತು ಮತ್ತು ನಿಬಂಧನೆಗಳು

1) ಈ ಕಾಮಗಾರಿಗಳನ್ನು ನಿರ್ವಹಿಸಲು 3ನೇ ದರ್ಜೆ ಹಾಗೂ ಮೇಲ್ಪಟ್ಟು ಅರ್ಹತೆ ಹೊಂದಿದವರಾಗಿರತಕ್ಕದ್ದು. ಹಾಗೂ ಅರ್ಜಿಯ ಜೊತೆ ಗುತ್ತಿಗೆದಾರರು ಬಾವ ಚಿತ್ರ ಸಹಿತದ ಪರವಾನಗಿ ಪತ್ರ (ಪಿ.ಡಬ್ಲ್ಯು.ಡಿ.& ನಗರಸಭೆ)ದ ದೃಢೀಕೃತ ಪ್ರತಿಯನ್ನು ಸಲ್ಲಿಸತಕ್ಕದ್ದು.

2) ಲೋಕೋಪಯೋಗಿ ಇಲಾಖೆಯಲ್ಲಿ ಲೈಸೆನ್ಸ್ ಹೊಂದಿದವರು ನಗರಸಭೆಯಲ್ಲಿಯೂ ಕೂಡ ಚಾಲ್ತಿ ಸಾಲಿನಲ್ಲಿ ನೊಂದಾಯಿತ ಗುತ್ತಿಗೆದಾರರಾಗಿರಬೇಕು.

3) ಡಾಂಬರೀಕರಣ ಕಾಮಗಾರಿಗಾಗಿ ಟೆಂಡರ್ ಹಾಕುವವರು ಕಾಮಗಾರಿಗೆ ಅವಶ್ಯಕವಾದ ಯಂತ್ರೋಪಕರಣ ಗಳನ್ನು ಸ್ವಂತಕ್ಕೆ ಹೊಂದಿರತಕ್ಕದ್ದು/ಬಾಡಿಗೆ ರೀತಿಯಿಂದ (ದಾಖಲೆ ಸಹಿತ) ಹೊಂದಿದವರು ಸದರಿ ದಾಖಲಾತಿಗಳೊಂದಿಗೆ ಕೆಲಸ ನಿರ್ವಹಿಸಿದ ಅನುಭವ ಪ್ರಮಾಣ ಪತ್ರದೊಂದಿಗೆ ಅರ್ಜಿ ಸಲ್ಲಿಸುವ ದಿನದಂದು ಹಾಜರುಪಡಿಸಿದವರಿಗೆ ಮಾತ್ರ ಟೆಂಡರ್‌ನಲ್ಲಿ ಭಾಗವಹಿಸಲು ಅವಕಾಶವಿರುತ್ತದೆ.

4) ಕಾಮಗಾರಿ ಕೆಲಸ ಪೂರ್ಣಗೊಳಿಸಬೇಕಾದ ಅವಧಿ 3 ತಿಂಗಳುಗಳಾಗಿರುತ್ತದೆ.

5) ರೂ.5.00 ಲಕ್ಷಗಳಿಗೆ ಮೇಲ್ಪಟ್ಟ ಕಾಮಗಾರಿ ಟೆಂಡರ್ ನಮೂನೆಯ ಬೆಲೆ ರೂ.1,000/– + ತೆರಿಗೆ. ರೂ.5.00 ಲಕ್ಷಗಳಿಗಿಂತ ಕಡಿಮೆ ಮೊತ್ತದ ಕಾಮಗಾರಿ ಟೆಂಡರ್ ನಮೂನೆಯ ಬೆಲೆ ರೂ.500/– + ತೆರಿಗೆ.

6) ಟೆಂಡರ್ ನಮೂನೆ ಸಲುವಾಗಿ ಅರ್ಜಿಗಳನ್ನು ಈ ಕಛೇರಿಯಲ್ಲಾಗಲಿ ಅಥವಾ ಮಾನ್ಯ ಜಿಲ್ಲಾ ನಗರಾಭಿವೃದ್ಧಿ ಕೋಶ, ಜಿಲ್ಲಾಧಿಕಾರಿಗಳ ಕಛೇರಿ ಹಾವೇರಿ ಇಲ್ಲಿ ಅರ್ಜಿ ಸಲ್ಲಿಸುವ ಕೊನೆಯ ದಿನಾಂಕ:11/04/2007 ಸಂಜೆ 5.30 ರ ಒಳಗಾಗಿ ಇರುತ್ತದೆ. ಟೆಂಡರ್ ನಮೂನೆಯ ಶುಲ್ಕವನ್ನು ಆ ದಿನವೇ ಪಾವತಿಸತಕ್ಕದ್ದು.



This document was created using SOLID CONVERTER PDF To remove this message, purchase the product at www.SolidPDF.com

7) ತಯಾರಿಸಿದ ಟೆಂಡರ್ ನಮೂನೆಗಳನ್ನು ಗುತ್ತಿಗೆದಾರರಿಗೆ ಈ ಕಾರ್ಯಾಲಯದಲ್ಲಿ ದಿನಾಂಕ:___________ ರಿಂದ ಕಛೇರಿ ವೇಳೆಯಲ್ಲಿ ಮಾತ್ರ ನೀಡಲಾಗುವುದು.

8) ಎಲ್ಲಾ ವಿವರಗಳನ್ನು ಭರ್ತಿ ಮಾಡಿದ ಟೆಂಡರ್‌ನ ನಮೂನೆ ಜೊತೆಗೆ ಇ.ಎಂ.ಡಿ.ಹಣವನ್ನು ನಗದಾಗಿ ನಗರಸಭೆ ನಿಧಿಗೆ ಪಾವತಿಸಿ ಅದರ ರಸೀತಿಯೊಂದಿಗೆ ಅಥವಾ ಪೌರಾಯುಕ್ತರ ಪದನಾಮಾಂಕಿತದಲ್ಲಿ ಡಿ.ಡಿ.ಪಡೆದು ದ್ವಿಪ್ರತಿಗಳ ಟೆಂಡರ್ ನಮೂನೆಯೊಂದಿಗೆ ಲಗತ್ತಿಸಿ, ಲಕೋಟೆಯನ್ನು ಸೀಲ್ (ಅರಗಿನಿಂದ) ಮಾಡಿ, ಇದೇ ಉದ್ದೇಶಕ್ಕಾಗಿ ನಗರಸಭೆಯಲ್ಲಿ ಇಡಲಾದ ಅಥವಾ ಜಿಲ್ಲಾ ನಗರಾಭಿವೃದ್ಧಿ ಕೋಶ, ಜಿಲ್ಲಾಧಿಕಾರಿಗಳ ಕಛೇರಿ ಹಾವೇರಿ ಇಲ್ಲಿ ಇಡಲಾದ ಟೆಂಡರ್ ಪೆಟ್ಟಿಗೆಯಲ್ಲಿ ದಿನಾಂಕ:___________ ರ 4.30 ಘಂಟೆಗಳೊಳಗಾಗಿ ಹಾಕತಕ್ಕದ್ದು. ನಿಗಧಿತ ಅವಧಿ ನಂತರ ಬರುವ ಟೆಂಡರ್‌ಗಳನ್ನು ಯಾವುದೇ ರೀತಿಯಿಂದಲೂ ಸ್ವೀಕರಿಸಲಾಗುವುದಿಲ್ಲ.

9) ಟೆಂಡರ್ ಬಾಕ್ಸನ್ನು ದಿನಾಂಕ:__________ ರಂದು ರಾಣೇಬೆನ್ನೂರು ನಗರಸಭೆಯಲ್ಲಿ ಲಭ್ಯವಿದ್ದ ಗುತ್ತಿಗೆದಾರರ ಸಮ್ಮುಖದಲ್ಲಿ ಬೆಳಿಗ್ಗೆ 11.00 ಘಂಟೆಗೆ ತೆರೆಯಲಾಗುವುದು.

10) ಟೆಂಡರ್‌ಗಾಗಿ ಪಾವತಿಸಿದ ಇ.ಎಂ.ಡಿ. ಹಣಕ್ಕೆ ಬಡ್ಡಿ ನೀಡಲಾಗುವುದಿಲ್ಲ. ನಾಮಂಜೂರಾದ ಗುತ್ತಿಗೆದಾರರ ಇ.ಎಂ.ಡಿ.ಹಣವನ್ನು ಟೆಂಡರ್ ಮಂಜೂರಾದ ನಂತರ ಹಿಂದಿರುಗಿಸಲಾಗುವುದು.

11) ಮೇಲ್ಕಂಡ ಕಾಮಗಾರಿಗಳು ಪೂರ್ಣಗೊಂಡ ದಿನಾಂಕದಿಂದ ಕಾಮಗಾರಿ ನಿರ್ವಹಣೆಗೆ 2 ವರ್ಷಗಳ ಅವಧಿಗೆ ಗುತ್ತಿಗೆದಾರರು ಯಾವುದೇ ಹೆಚ್ಚಿನ ವೆಚ್ಚವಿಲ್ಲದೇ ನಿರ್ವಹಿಸತಕ್ಕದ್ದು. ಅಲ್ಲಿಯವರೆಗೆ ಇ.ಎಂ.ಡಿ. ಮತ್ತು ಎಸ್.ಡಿ.ಮೊತ್ತ ಹಿಂದಿರುಗಿಸಲಾಗುವುದಿಲ್ಲ.

12) ಗುತ್ತಿಗೆದಾರರು ಕಾಮಗಾರಿಯ ಪ್ರಾರಂಭಿಸಿ ಹಂತ, ಮಧ್ಯಂತರದ ಹಂತದಲ್ಲಿ ಹಾಗೂ ಮುಕ್ತಾಯದ ಹಂತದಲ್ಲಿಯ ಕಾಮಗಾರಿ ನಿರ್ವಹಣೆಯ ಬಾವ ಚಿತ್ರಗಳನ್ನು ಕಡ್ಡಾಯವಾಗಿ ನೀಡತಕ್ಕದ್ದು.

13) ಈ ಮೇಲೆ ನಮೂದಿಸಿದ ದಿನಾಂಕಗಳಂದು ಸರ್ಕಾರಿ ರಜೆಗಳು ಬಂದಲ್ಲಿ, ಕಛೇರಿಯ ಮುಂದಿನ ದಿನಾಂಕವೆಂದು ಬಾವಿಸತಕ್ಕದ್ದು.

14) ಟೆಂಡರ್ ಸ್ವೀಕರಿಸುವ ಅಥವಾ ತಿರಸ್ಕರಿಸುವ ಅಧಿಕಾರವನ್ನು ನಗರಸಭೆ ಹೊಂದಿರುತ್ತದೆ.

15) ಟೆಂಡರ್‌ಗಾಗಿ ಇ.ಎಂ.ಡಿ. ಹಣ ಪಾವತಿಸದಿರುವ, ಚೆಕ್ಕುಗಳನ್ನು ಲಗತ್ತಿಸಿರುವ ಮತ್ತು ಮಾಹಿತಿ ಅಪೂರ್ಣವಿರುವ ಟೆಂಡರ್‌ಗಳನ್ನು ಗಣನೆಗೆ ತೆಗೆದುಕೊಳ್ಳಲಾಗುವುದಿಲ್ಲ.

16) ಕಾಮಗಾರಿಯ ಅಂದಾಜು ಮೊತ್ತಕ್ಕಿಂತ ಕಡಿಮೆ ದರಕ್ಕೆ ಮಾಡಲು ಇಚ್ಚಿಸಿದ ಗುತ್ತಿಗೆದಾರರು ಕಡಿಮೆ ದರದ ಮೊಬಲಗಿಗೆ ಟೆಂಡರ್ ನಮೂನೆ ಜೊತೆಯಲ್ಲಿಯೇ ಡಿ.ಡಿ. ಅಥವಾ ನಗದು ರೂಪದಲ್ಲಿ ಪಾವತಿ ಮಾಡಿದ ರಸೀತಿಯೊಂದಿಗೆ ಟೆಂಡರ್ ನಮೂನೆ ಜೊತೆಗೆ ಲಗತ್ತಿಸಿ ಸಲ್ಲಿಸತಕ್ಕದ್ದು.

17) ಸರ್ಕಾರದ ಹಾಗೂ ಪೌರಾಡಳಿತ ನಿರ್ದೇಶನಾಲಯದ ಇತ್ತೀಚಿನ ಸುತ್ತೋಲೆ ಮತ್ತು ಮಾರ್ಗದರ್ಶನಗಳನ್ವಯ ನಡೆದುಕೊಳ್ಳಲು ಗುತ್ತಿಗೆದಾರರು ಬದ್ದರಾಗಿರತಕ್ಕದ್ದು.

18) ಹೆಚ್ಚಿನ ಮಾಹಿತಿಯನ್ನು ನಗರಸಭೆ ಕಾರ್ಯಾಲಯದ ಕಾಮಗಾರಿ ವಿಭಾಗದಲ್ಲಿ ಅಥವಾ ಕಛೇರಿಯ ವೆಬ್‌ಸೈಟ್ http://www.ranebennurcity.gov.in/TenderNotification/12thFinanceworks.pdf ರಲ್ಲಿ ಪಡೆಯ ಬಹುದಾಗಿದೆ.

**(ಎಂ.ಆರ್.ಗಿರಡ್ಡಿ)**
ಸ.ಕಾ.ನಿ.ಅಭಿಯಂತರರು/ಪೌರಾಯುಕ್ತರು,
ನಗರಸಭೆ, ರಾಣೇಬೆನ್ನೂರು.

**(ಅಮ್ಲಾನ್ ಆದಿತ್ಯ ಬಿಸ್ವಾಸ್)** I.A.S.
ಆಡಳಿತಾಧಿಕಾರಿಗಳು,
ನಗರಸಭೆ, ರಾಣೇಬೆನ್ನೂರು , ಹಾಗೂ
ಜಿಲಾ ದಿಕಾರಿಗಳು. ಹಾವೇರಿ.



This document was created using SOLID CONVERTER PDF
To remove this message, purchase the product at www.SolidPDF.com